ಬಗ್ಗೆ ಶೇಕಡ 18ರಷ್ಟು ಕಡ್ಡಾಯವಾಗಿ ನೇಮಕಾತಿಯನ್ನು ಮಾಡಬೇಕೆಂದು ಇದೆ. ಅದು ಡೈಲಿವೇಜಸ್ ಮೇಲೆ ತೆಗೆದುಕೊಂಡರೂ ಕೂಡ ರಿಸರ್ವೇಷನ್ ಅನ್ನು ಮೆಂಟೇನ್ ಮಾಡಬೇಕೆಂದು ಇದೆ. ಇವತ್ತು ರಾಜ್ಯದಲ್ಲಿ ಸಚಿವ ಸಂಪುಟದ ಎಲ್ಲಾ ಸದಸ್ಯರು ಮಂತ್ರಿಗಳು, ಅಪಾಯಿಂಟ್‌ಮೆಂಟ್ ಅನ್ನು ಮಾಡಿಕೊಂಡಿದ್ದಾರೆ. ಅವರು ತಮ್ಮ ಪರ್ಸನಲ್ ಸ್ಟ್ಯಾಫ್‌ಗಳನ್ನು ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅದರಲ್ಲಿ ಶೇಕಡ 18ರಷ್ಟು ತಾವು ರಿಸರ್ವೇಷನ್ ಅನ್ನು ಮೆಂಟೇನ್ ಮಾಡಿದ್ದಿರೋ ಹೇಗೆ? ಅದನ್ನು ಈ ಸದನಕ್ಕೆ ಹೇಳಬೇಕಾಗುತ್ತದೆ. ದಯವಿಟ್ಟು ಮಾನ್ಯ ಮಂತ್ರಿಯವರು ಉತ್ತರಿಸಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೇ..

ಉಪಾಧ್ಯಕ್ಷರು: ಮಾನ್ಯ ಆಂಜನೇಯರವರೇ, ಆಯಿತಲ್ಲಾ ಮತ್ತೇಕೆ? ಕೇಳಿದ ಪ್ರಶ್ನೆಯನ್ನೇ ಮತ್ತೇ ಏಕೆ ಕೇಳಲು ಹೋಗುತ್ತೀರಿ.?

ಶ್ರೀ ಹೆಚ್. ಆಂಜನೇಯ: ನನ್ನದು ಒಂದೇ ಒಂದು ಕ್ಲಾರಿಫಿಕೇಷನ್ ಇದೆ ಅಷ್ಟೇ. ಸುಳ್ಳು ಜಾತಿ ಪ್ರಮಾಣ ಪತ್ರದ ಬಗ್ಗೆ ಸಿ.ಆರ್.ಇ.ಸೆಲ್‌ನಲ್ಲಿ ಇದೆ ಎಂದು ಹೇಳಿದರು. ಸಿ.ಆರ್.ಇ.ಸೆಲ್‌ನಲ್ಲಿ ಎಷ್ಟು ಪೆಂಡಿಂಗ್ ಇದೆ, ಎಷ್ಟು ಜನರಿಗೆ ಶಿಕ್ಷೆ ಕೊಟ್ಟಿದ್ದೀರಿ? ಇದರ ಬಗ್ಗೆ ಬರೀ ವಿಚಾರಣೆ ಮಾಡುವುದಲ್ಲ. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದು ನ್ಯಾಯಾಧೀಶರಾಗಿದ್ದಾರೆ ಎಂದು ನಾನು ಹೇಳಿದೆ. ಬಹಳ ಗಂಭೀರವಾದಂಥ ಆರೋಪ ಮಾಡಿದ್ದೇನೆ. ಶಾಸಕರು ಆದರು, ಮಂತ್ರಿಗಳಾದರು ಎಂದೂ ಕೂಡ ಹೇಳಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ಆಂಜನೇಯರವರೇ, ಈಗಾಗಲೇ ಅದಕ್ಕೆಲ್ಲಾ ರಿಪ್ಲೈ ಕೊಟ್ಟಿದ್ದಾರೆ. ತಾವು ಕುಳಿತುಕೊಳ್ಳಿ. ಈಗ ಬೇಡಿಕೆಗಳನ್ನು ಮತಕ್ಕೆ ಹಾಕೋಣ.

(ಗೊಂದಲ)

ಶ್ರೀ ಗೋವಿಂದ ಎಂ, ಕಾರಜೋಳ: ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ. ಕ್ಲಾರಿಫೀಕೇಷನ್‌ಗೆ ಸರಿಯಾಗಿ ಅವಕಾಶ ನೀಡದಿರುವುದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಗೋವಿಂದ ಎಂ ಕಾರಜೋಳ ನೇತೃತ್ವದಲ್ಲಿ ಬಿ.ಜೆ.ಪಿ.ಯ ಸದಸ್ಯರು ಸಭಾತ್ಯಾಗ ಮಾಡಿದರು)

ಅನುದಾನ ಬೇಡಿಕೆಗಳು, 2005–2006

ಉಪಾಧ್ಯಕ್ಷರು: ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ.